ಅವಕಾಶ ಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಅವತ್ತಿನ ಅಲ್ಲಿನ ಸಿಚ್ಯುವೇಶನ್‌ನ್ನು ಐಜಿಪಿರವರು ನೋಡಿಕೊಂಡು ಬಂದು ಚಿಕ್ಕಬಳ್ಳಾಪುರದಲ್ಲಿ ಆಲ್ಟ್ ಮಾಡಿದ್ದಾರೆ. ಅವರು ಅವತ್ತಿನ ದಿವಸ ಶಿಡ್ಲಘಟ್ಟದಲ್ಲಿ ಆಲ್ಟ್ ಮಾಡದೆ ಚಿಕ್ಕಬಳ್ಳಾಪುರಕ್ಕೆ ಹೋಗಿ ಆಲ್ಟ್ ಮಾಡಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ನೆಕ್ಸ್ಟ್‌ಡೇ ಜನ ಅಟ್ಯಾಕ್ ಮಾಡಿದ ಮೇಲೆ ಅಲ್ಲಿ ಫೈರಿಂಗ್ ಆಗಿರತಕ್ಕಂಥದ್ದು ನಿಜ. ಇದಾದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾನು ಆಸ್ಪತ್ರೆಗೆ ಹೋಗಿ ಅವರನ್ನು ನೋಡಿದ್ದೇವೆ. ಅನಂತರ ನಾನು ತಕ್ಷಣ ಅಲ್ಲಿಗೆ ಹೋಗಿ ಶಾಂತಿ ಸಭೆ ಕರೆದು ಸ್ವಲ್ಪ ಸಮಾಧಾನ ಮಾಡಿ, ಅನಂತರ ಆ ಮಗುವನ್ನು ನೋಡಿ ಆ ಮಗುವಿಗೆ ಧೈರ್ಯ ಕೂಡ ಹೇಳಿ ಬಂದಿದ್ದೇನೆ. ಮತ್ತೆ ಅವತ್ತು ಸರ್ಕಾರದ ಪರವಾಗಿ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ ಅವೆಲ್ಲವನ್ನು ಕೂಡ ಮಾಡಿ ಬಂದಿದ್ದೇನೆ. ಇದು ಈಗ ಅವರಿಬ್ಬರನ್ನು ಅರೆಸ್ಟ್ ಮಡಲಾಗಿದೆ. ಈಗ ಅವರು ಜೈಲಿನಲ್ಲಿದ್ದಾರೆ. ಮತ್ತೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ, ಇವರನ್ನು ಒಳಗೆ ಕಳುಹಿಸಿರುವ ಬಗ್ಗೆ ಮತ್ತು ಮ್ಯಾಜಿಸ್ಟ್ರೇಟ್ ಮುಂದೆ ಕಳುಹಿಸಿಕೊಟ್ಟಿರತಕ್ಕಂಥದ್ದರಲ್ಲಿ ಏನಾದರು ಇದ್ದಲ್ಲಿ ಇದರ ಬಗ್ಗೆ ಒಂದು ತನಿಖೆ ಮಾಡಲೆಂದು ಡಿವಿಜನಲ್ ಮ್ಯಾಜಿಸ್ಟ್ರೇಟ್ ಹಂತದಲ್ಲಿ ತನಿಖೆ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇನೆ. ಈಗ ತನಿಖೆ ಕೂಡ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನೇನು ಮಾಡುವುದಕ್ಕೆ ಅವಶ್ಯಕತೆ ಇದೆಯೋ, ಅಗತ್ಯತೆ ಇದೆಯೋ ಅವೆಲ್ಲವನ್ನೂ ಕೂಡ ಸರ್ಕಾರ ಮಾಡಿದೆ. ಆದ್ದರಿಂದ ಸರ್ಕಾರ ಎಲ್ಲಿಯೂ ಕೂಡ ಫೇಲ್ ಆಗಿಲ್ಲ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಶ್ರೀರಾಮ ರೆಡ್ಡಿಯವರು ಮಧ್ಯದಲ್ಲಿ ಮಾತನಾಡುವುದು ಬೇಡ. ಇದರ ಬಗ್ಗೆ ಡೀಟೇಲ್ ಮಾಹಿತಿ ಬೇಕಾದರೆ ನಾಳೆದಿವಸ ವರದಿ ತರಿಸಿ ಕೊಡುವುದಕ್ಕೆ ಸರ್ಕಾರ ಸಿದ್ದವಾಗಿದೆ ಎಂದು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ

ಅಧ್ಯಕ್ಷರು: ಆಯಿತು. ಈಗ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಲು ಮಾನ್ಯ ಸದಸ್ಯರಾದ ಶಕುಂತಲಾ ಟಿ. ಶೆಟ್ಟಿರವರಿಗೆ ಅವಕಾಶ

ಕೊಡುತ್ತೇನೆ.

ಶ್ರೀಮತಿ ಶಕುಂತಲಾ ಟಿ. ಶಟ್ಟಿ(ಪುತ್ತೂರು): ಮಾನ್ಯ ಸಭಾಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಪುತ್ತೂರು ಕ್ಷೇತ್ರದ ಠಾಣಾ ವ್ಯಾಪ್ತಿಯಲ್ಲಿ ನಾನು ಮೊನ್ನೆದಿವಸ ಅಧಿವೇಶನಕ್ಕೆ ಬಂದು ಹೋಗುವ ಮಧ್ಯದಲ್ಲಿ ಎರಡು ಕೊಲೆಗಳಾಗಿವೆ. ಮಾನ್ಯ ಶ್ರೀರಾಮ ರೆಡ್ಡಿಯವರು ಈಗಾಗಲೇ ಹೇಳಿದಂತೆ ಇಂಥ ಪ್ರಕರಣಗಳನ್ನು ನೀಡಿದಾಗ ಬಹುಶಃ ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ವಿಫಲವಾಗಿದೆಯೋ ಅಥವಾ ಸರ್ಕಾರ ವಿಫಲವಾಗಿದೆಯೋ ಎನ್ನತಕ್ಕಂಥದ್ದು ಯಾವುದೂ ಕೂಡ ನನಗೆ ಗೊತ್ತಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಒಟ್ಟು ಎರಡು ಕೊಲೆಗಳಾಗಿವೆ. ಒಂದು ಕೊಲೆ ಬಗ್ಗೆ ಹೇಳುವುದಾದರೆ, ಕೊಲೆಯಾಗಿರತಕ್ಕಂಥ ಕಾಮತ್‌ರವರು ಇದ್ದಿಲು ವ್ಯಾಪಾರ ಮಾಡುತ್ತಿದ್ದರಿಂದ ಅವರನ್ನು ಅಲ್ಲಿನ ಸಾಮಾನ್ಯ ಜನರು ಇದ್ದಿಲು ಕಾಮತ್‌ರವರು ಎಂದು ಕರೆಯುತ್ತಿದ್ದರು. ಇವರು ರಾತ್ರಿ ಮಲಗಿದ್ದಾರೆ. ಇವರ ಮನೆಗೆ ಯಾವತ್ತೂ ಬಾರದೆ ಇರತಕ್ಕಂಥವರು ಬೆಳಿಗ್ಗೆ ಇವರ ಮನೆಗೆ ಬಂದು ನೋಡಿದಾಗ ಬಾಗಿಲು ಮುಚ್ಚಿತ್ತು. ಅವರು ಹಿಂಬಾಗಿಲಿನಿಂದ ಹೋಗಿ ನೋಡಿದಾಗ ಅಲ್ಲಿ ಎರಡು ಗ್ಲಾಸ್ ಟೀ ಮಾಡಿಟ್ಟಿರತಕ್ಕಂಥದ್ದು ಹಾಗೆಯೇ ಇತ್ತು. ಆದರೆ, ಅವರ ತಲೆಗೆ ಹೊಡೆದು ಕೊಲೆ ಮಾಡಲಾಗಿತ್ತು ಮತ್ತೆ ಇನ್ನೊಂದು ಕೊಲೆಯ ಬಗ್ಗೆ ಹೇಳುವುದಾದರೆ, ಕಬಕ ಎಂಬಲ್ಲಿ ಗಂಗಾಧರ್ ಪೂಜಾರಿ ಎಂಬುವವರು ಮಲಗಿದ್ದಾಗ ರಾತ್ರಿ 9.30 ಗಂಟೆಗೆ ಅವರಿಗೆ ಯಾರಿಂದಲೋ ಫೋನ್ ಬಂದು ನೀವು ಪುತ್ತೂರಿಗೆ ಬರಬೇಕೆಂದು ಹೇಳಿದ್ದಕ್ಕೆ ಅವರು ಆ ಸಮಯದಲ್ಲಿ ಹೋದರು. ಬೆಳಿಗ್ಗೆ ನೋಡಿದಾಗ ಅವರ ಹೆಣ ರೋಡ್ ಸೈಡ್‌ನಲ್ಲಿ ಬಿದ್ದಿತ್ತು. ಸಾಮಾನ್ಯ ಜನರ ಬಾಯಲ್ಲಿಯೂ ಕೂಡ ಇದು ಕೊಲೆ ಎಂದು ಕೇಳಿ ಬರುತ್ತದೆ. ಆದರೆ, ಪೊಲೀಸ್‌ನವರು ಅಪಘಾತವೆಂದು ದಾಖಲು ಮಾಡಿದ್ದಾರೆ. ಇವರ ದಾಖಲು ಪ್ರಕಾರ ಇದು ಅಪಘಾತವಾಗಿದ್ದರೆ, ಆತ ಮನೆಯಿಂದ ಹೋಗುವಾಗ ಹಾಕಿದ್ದಂಥ ಶರ್ಟ್ ಆತನ ಮೈ ಮೇಲೆ ಆ ಸಂದರ್ಭದಲ್ಲಿ ಇರಲಿಲ್ಲ. ಮತ್ತೆ ಆತ ಕೈ ಬೆರಳಿಗೆ ಹಾಕಿಕೊಂಡಿದ್ದಂಥ ಉಂಗುರ ಇರಲಿಲ್ಲ. ಅಪಘಾತವಾದ ಸ್ಥಳದಲ್ಲಿ ಬೈಕ್‌ನ ಕೀ ಇರಲಿಲ್ಲ. ಬೈಕ್ ಹೋಗಿ ಎದುರುಗಡೆ ಇದ್ದಂಥ ಬಂಡೆಗೆ ಒಡೆದಿತ್ತು. ಆದರೆ, ಬೈಕ್‌ನ ಹಿಂದಿನ ಲೈಟ್ ಮಾತ್ರ ಪೂರ್ತಿಯಾಗಿ ಒಡೆದು ಹೋಗಿತ್ತು. ಈ ವಿಚಾರವೆಲ್ಲವನ್ನು ನೋಡಿದಾಗ ರಾತ್ರಿ

ಇವರಿಗೆ ಫೋನ್ ಮಾಡಿ ಬರಬೇಕೆಂದು ಹೇಳಿದವರು ಯಾರು? ಮತ್ತು ಆತನ ಬೈಕ್ ಸಿಕ್ಕಿದ್ದು ಎಲ್ಲಿ ಎಂಬುದನ್ನೆಲ್ಲಾ ನೋಡಿದಾಗ ಇಲ್ಲಿ ಒಂದು ರೀತಿಯ ನಿಗೂಢತೆ ಇರತಕ್ಕಂಥದ್ದು ಕಂಡು ಬರುತ್ತದೆ. ಇಂಥ ಬೇರೆ ಬೇರೆ ರೀತಿಯ ಅಪಘಾತ ಮತ್ತು ಆತ್ಮಹತ್ಯೆ ಇನ್ನಿತರ ಘಟನೆಗಳು ನಡೆಯುತ್ತಿರುವುದರಿಂದ ಬಹುಶಃ ಇವತ್ತಿನ ದಿವಸ ಮನುಷ್ಯರು ಯಾರನ್ನು ವಿಶ್ವಾಸದಿಂದ ನಂಬುವುದಕ್ಕೆ ಸಾಧ್ಯ ಇಲ್ಲದೆ ಇರತಕ್ಕಂಥ ಸ್ಥಿತಿ ಬಂದಿದೆ. ಈಗ ನಮ್ಮಲ್ಲಿ ಎರಡು ಕೊಲೆಗಳಾಗಿದ್ದು, ಇದರಲ್ಲಿ ಒಂದು ಸಂಶಯಾಸ್ಪದ ರೀತಿಯಲ್ಲಿ ಕೊಲೆಯಾಗಿದೆ ಇನ್ನೊಂದು ಪೊಲೀಸ್‌ನವರ ಲೆಕ್ಕದಲ್ಲಿ ಬಂಧಿಸಿಲ್ಲ. ಹಾಗೆಯೇ ಯಾರ ಮೇಲೂ ಕೂಡ ಪೊಲೀಸ್‌ನವರು ಸಂಶಯ ವ್ಯಕ್ತಪಡಿಸಿಲ್ಲ. ಯಾರು ಈ ಕೊಲೆಗಳನ್ನು ಮಾಡಿದ್ದಾರೆ ಅವರನ್ನು ಬಂಧಿಸಲು ಅಸಾಧ್ಯವಾದಲ್ಲಿ-ಶಾಂತಿಯುತವಾಗಿರುವ ದಕ್ಷಿಣ ಕನ್ನಡದಲ್ಲಿ ಈಗ ನಿತ್ಯ ಕೊಲೆಗಳು ನಡೆಯತಕ್ಕಂಥ ಪ್ರಸಂಗ ಬರುತ್ತದೆ. ಈ ರೀತಿಯಾಗಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಕಾಣುತ್ತದೆ. ದಯಮಾಡಿ ತಕ್ಷಣ ಪೊಲೀಸ್‌ನವರು, ಸರ್ಕಾರದವರು ಇದರ ಬಗ್ಗೆ ಕಾರ್ಯಪ್ರವೃತ್ತ ರಾಗಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ಪುತ್ತೂರು ಕ್ಷೇತ್ರದ ಶಾಸಕರಾಗಿರತಕ್ಕಂಥ ಸಹೋದರಿಯಾದ ಶ್ರೀಮತಿ ಶಕುಂತಲಾ ಶೆಟ್ಟಿಯವರು ಸದರಿ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದು, ಪುತ್ತೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳೆದ ವಾರ ನಡೆದಿರತಕ್ಕಂಥ ಸಂಶಯಾಸ್ಪದ ಕೊಲೆಯಬಗ್ಗೆ ಮತ್ತು ಮತ್ತೊಂದು ಕೊಲೆಯ ಬಗ್ಗೆ ಅಂದರೆ ಎರಡು ಕೊಲೆಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈಗಾಗಲೇ ಇದರ ಬಗ್ಗೆ ಸಂಬಂಧಪಟ್ಟಂತಹ ಪೋಲೀಸ್ ಅಧಿಕಾರಿಗಳು ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಮತ್ತು ಕ್ರಮ ತೆಗೆದುಕೊಂಡಿರತಕ್ಕಂಥದ್ದರಲ್ಲಿ ಏನಾದರೂ ಲೋಪದೋಷಗಳು ಆಗಿವೆಯೇ ಎಂಬುದರ ಬಗ್ಗೆ ನಾನು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಜೊತೆಯಲ್ಲಿ ಮಾತನಾಡುತ್ತೇನೆ. ರಾಜ್ಯದಾದ್ಯಂತ ಕೊಲೆಗಳು ನಡೆಯುತ್ತಿವೆ ಎನ್ನುತಕ್ಕಂಥ ಮಾತನ್ನೂ ಕೂಡ ಅವರು ಹೇಳಿದ್ದಾರೆ. ನಾನು ಇದನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಅನೇಕ ಕೊಲೆಗಳು ನಡೆಯುತ್ತಿರುವುದು ಪತ್ರಿಕೆಗಳಲ್ಲಿ ಓದಿದ್ದೇವೆ. ಮತ್ತೆ ಇವುಗಳನ್ನು ನೋಡಿದ್ದೇವೆ,

ಇವತ್ತಿನ ದಿವಸ ಇದಕ್ಕೆಲ್ಲಾ ನಮ್ಮ ಸಮಾಜದಲ್ಲಿ ಅನೇಕ ಕಾರಣಗಳು ಸಹಿತ ಇರುತ್ತವೆ. ಆದ್ದರಿಂದ ಸರ್ಕಾರದ ವೈಫಲ್ಯ ಅಥವಾ ಪೊಲೀಸ್ ಇಲಾಖೆಯ ವೈಫಲ್ಯ ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ಎರಡು ಕೊಲೆಗಳ ಹಿಂದೆ ಏನು ಹಿನ್ನೆಲೆಗಳು ಇವೆ ಎಂಬುದರ ಬಗ್ಗೆ ವಿಚಾರ ನಡೆಸಿ ಇದರ ಬಗ್ಗೆ ಸರ್ಕಾರ, ಪೊಲೀಸ್ ಇಲಾಖೆ ಇದುವರೆಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಆದಷ್ಟು ಜಾಗ್ರತೆ ವರದಿ ತರಿಸುವಂತೆ ಪೊಲೀಸ್ ಇಲಾಖೆಯ ಅಂದರೆ ಗೃಹ ಕಾರ್ಯದರ್ಶಿಯವರಿಗೆ ಸೂಚನೆ ಕೊಡೊತ್ತೇನೆ. ಮತ್ತೆ ವರದಿ ತರಿಸಿ ಮಾನ್ಯ ಮುಖ್ಯಮಂತ್ರಿಯವರ ಮುಖೇನ ಈ ಸದನದಲ್ಲಿ ಉತ್ತರ ಕೊಡಿಸುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಎಸ್.ಬಸವರಾಜ್: ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡುವುದಕ್ಕೆ ತಮಗೆ ನಾನು ಪತ್ರ ಕೊಟ್ಟಿದ್ದೇನೆ.

ಅಧ್ಯಕ್ಷರು: ಮಾನ್ಯ ಬಸವರಾಜ್‌ರವರೆ, ತಾವು ಬೇಡಿಕೆ ಮೇಲೆ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಬಸವರಾಜ್‌ರವರು ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ತಮಗೆ ಒಂದು ಪತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು: ಪತ್ರ ಕೊಟ್ಟಿದ್ದಾರೆ. ಈಗಾಗಲೇ ಎರಡು ವಿಷಯಗಳಿಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ 5 ಗಂಟೆ ಆಗಿದೆ. ಈಗ ಬೇಡಿಕೆಯ ಮೇಲೆ ಚರ್ಚೆಮಾಡಿದರೆ ಅದರ ಮಹತ್ವ ಹೊರಟು ಹೋಗುತ್ತದೆ. ಆದ್ದರಿಂದ, ಬಸವರಾಜ್‌ರವರು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಬೇಡಿಕೆಯ ಮೇಲಿನ ಚರ್ಚೆಯನ್ನು ನಾಳೆದಿವಸ ತೆಗೆದುಕೊಳ್ಳೋಣ.

ಅಧ್ಯಕ್ಷರು: ಬೇಡಿಕೆ ಮೇಲೆ ಚರ್ಚೆಯನ್ನು ಅವರು ಪ್ರಾರಂಭ ಮಾಡಲಿ. ಇವತ್ತು ಒಂದು ಗಂಟೆಯಾದರೂ ಬೇಡಿಕೆ ಮೇಲೆ ಚರ್ಚೆಯಾಗಿ ಒಂದಿಬ್ಬರು ಇದರ ಬಗ್ಗೆ ಮಾತನಾಡಲಿ.

ಇವತ್ತು